ದೂರವಾಣಿ/Phone : 0824-2287276
ಫ್ಯಾಕ್ಸ್/Fax : 0824-2287424
ಇ-ಅಂಚೆ/E-mail : registrar@mangaloreuniversity.ac.in
registrarmangaloreuniversity@gmail.com
ವೆಬ್‌ಸೈಟ್/Website : www.mangaloreuniversity.ac.in

# ಮಂಗಳೂರು ವಿಶ್ವವಿದ್ಯಾನಿಲಯ
# MANGALORE UNIVERSITY
(Accredited by NAAC with' A' Grade)

ಕುಲಸಚಿವರ ಕಛೇರಿ
ಮಂಗಳಗಂಗೋತ್ರಿ – 574 199
ಕರ್ನಾಟಕ, ಇಂಡಿಯ

Office of the Registrar
Mangalagangothri - 574 199
Karnataka, India

ಕ್ರಮಾಂಕ/No. ಮಂವಿವಿ/ಸಿಂಡಿ/ಸಾ.ಸ.4/4/2018–19/ಎಸ್2

ದಿನಾಂಕ/Date : 12.06.2018

<u>ತುರ್ತು ರವಾನೆ</u>

ರಿಗೆ:

ಸಿಂಡಿಕೇಟಿನ ಎಲ್ಲಾ ಸದಸ್ಯರಿಗೆ.

ಮಾನ್ಯರೇ,

ವಿಷಯ: ದಿನಾಂಕ **04.06.2018** ರಂದು ನಡೆದ ಸಿಂಡಿಕೇಟಿನ 2018ನೇ ಸಾಲಿನ ನಾಲ್ಕನೆಯ ಸಾಮಾನ್ಯ ಸಭೆಯ ನಡಾವಳಿಯ ಬಗ್ಗೆ.

*******

ದಿನಾಂಕ **04.06.2018** ರಂದು ನಡೆದ ಸಿಂಡಿಕೇಟಿನ 2018ನೇ ಸಾಲಿನ ನಾಲ್ಕನೆಯ ಸಾಮಾನ್ಯ ಸಭೆಯ ನಡಾವಳಿಯನ್ನು ಮುಂದಿನ ಸಿಂಡಿಕೇಟು ಸಭೆಯಲ್ಲಿ ದೃಢೀಕರಿಸುವ ಸಲುವಾಗಿ ಈ ಪತ್ರದೊಂದಿಗೆ ಕಳುಹಿಸಿಕೊಡಲು ನಿರ್ದೇಶಿತನಾಗಿದ್ದೇನೆ. ಆಕ್ಷೇಪಣೆಗಳು ಇದ್ದಲ್ಲಿ ನಡಾವಳಿ ತಮಗೆ ತಲುಪಿದ ಒಂದು ವಾರದೊಳಗೆ (7 ದಿವಸ) ಲಿಖಿತ ಮೂಲಕ ಕುಲಸಚಿವರಿಗೆ ತಿಳಿಸಲು ಕೋರಲಾಗಿದೆ.

ತಮ್ಮ ವಿಶ್ವಾಸಿ,
12/06/18
ಕುಲಸಚಿವರು.

ಪ್ರತಿಗಳು:

1. ರಾಜ್ಯಪಾಲರ ಪ್ರಧಾನ ಕಾರ್ಯದರ್ಶಿ, ರಾಜಭವನ ಬೆಂಗಳೂರು – 560 001
2. ಸರಕಾರದ ಪ್ರಧಾನ ಕಾರ್ಯದರ್ಶಿ, (ಉನ್ನತ ಶಿಕ್ಷಣ) ಶಿಕ್ಷಣ ಇಲಾಖೆ, 5ನೇ ಮಹಡಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು – 560 001.
3. ಕುಲಪತಿಯವರ ಆಪ್ತ ಕಾರ್ಯದರ್ಶಿ / ಕುಲಸಚಿವರ ಆಪ್ತಸಹಾಯಕಿ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ.

## ಮಂಗಳೂರು ವಿಶ್ವವಿದ್ಯಾನಿಲಯ

**ದಿನಾಂಕ 04.06.2018 ರಂದು ಪೂರ್ವಾಹ್ನ ಗಂಟೆ 11:00ಕ್ಕೆ ಸರಿಯಾಗಿ ಮಂಗಳೂರು ವಿಶ್ವವಿದ್ಯಾನಿಲಯದ ಸಿಂಡಿಕೇಟು ಸಭಾಂಗಣದಲ್ಲಿ ನಡೆದ ಸಿಂಡಿಕೇಟಿನ 2018ನೇ ಸಾಲಿನ ನಾಲ್ಕನೆಯ ಸಾಮಾನ್ಯ ಸಭೆಯ ನಡಾವಳಿಗಳು.**

ಉಪಸ್ಥಿತ ಸದಸ್ಯರು:

| | |
|---|---|
| 1. **ಪ್ರೊ. ಕೆ. ಭೈರಪ್ಪ**<br>ಕುಲಪತಿಗಳು<br>ಮಂಗಳೂರು ವಿಶ್ವವಿದ್ಯಾನಿಲಯ,<br>**ಮಂಗಳಗಂಗೋತ್ರಿ–574 199.** | ಅಧ್ಯಕ್ಷರು |
| 2. **ಶ್ರೀ ಮಹೇಶ್ ರಾವ್.**<br>ಜಂಟಿ ನಿರ್ದೇಶಕರು<br>ಕಾಲೇಜು ಶಿಕ್ಷಣ ಇಲಾಖೆ, ಪ್ರಾದೇಶಿಕ ಕಚೇರಿ, ಮಂಗಳೂರು<br>(ಕಾಲೇಜು ಶಿಕ್ಷಣ ಆಯುಕ್ತರ ಪರವಾಗಿ) | ಸದಸ್ಯರು |
| 3. **ಡಾ. ಈಶ್ವರ ಪಿ.**<br>ಡೀನರು, ವಾಣಿಜ್ಯ ನಿಕಾಯ<br>ಮತ್ತು ಪ್ರಾಧ್ಯಾಪಕರು, ಸ್ನಾತಕೋತ್ತರ ವಾಣಿಜ್ಯ ಅಧ್ಯಯನ ವಿಭಾಗ<br>ಮಂಗಳೂರು ವಿಶ್ವವಿದ್ಯಾನಿಲಯ<br>**ಮಂಗಳಗಂಗೋತ್ರಿ–574 199.** | – " – |
| 4. **ಶ್ರೀ ಅಶೋಕ್ ಕುಮಾರ್ ರೈ,**<br>"ಅನುರಾಗ್", ಡಿ. ನಂ.–2–30–2484/1<br>ಕಾಸ್ಮಸ್ ಲೇನ್, ಕದ್ರಿ ಕಂಬ್ಳ, **ಮಂಗಳೂರು** | – " – |
| 5. **ಪ್ರೊ. ಬಿ. ರಹಮತ್ ಅಲಿ**<br>ಪ್ರಾಂಶುಪಾಲರು, ಬದ್ರಿಯಾ ಪ್ರಥಮ ದರ್ಜೆ ಕಾಲೇಜು<br>ಕಂದಕ, **ಮಂಗಳೂರು – 575 001** | – " – |
| 6. **ಡಾ. ಯು. ತಾರಾ ರಾವ್,**<br>ಪ್ರಾಂಶುಪಾಲರು, ಸರಕಾರಿ ಪ್ರಥಮ ದರ್ಜೆ ಕಾಲೇಜು,<br>ಕಾವೂರು **ಮಂಗಳೂರು – 575 015.** | – " – |
| 7. **ಶ್ರೀ ನಿತ್ಯಾನಂದ ಕೆ.,**<br>ಪ್ರಾಂಶುಪಾಲರು, ಎಸ್.ಡಿ.ಎಂ. ಕಾಲೇಜ್ ಆಫ್ ಎಜುಕೇಶನ್,<br>**ಉಜಿರೆ – 574 240.** | – " – |
| 8. **ಶ್ರೀ ವಿಕ್ಟರ್ ವಾಲ್ಟರ್ ನರೋನ್ಹಾ**<br>ಬಿನ್ ಡೊಮಿನಿಕ್ ರೊಸಾರಿಯೋ ನರೋನ್ಹ<br>ಸೊರ್ನಾಡು ಮನೆ ಮತ್ತು ಅಂಚೆ,<br>ಪಂಜಿಕಲ್ಲು ಗ್ರಾಮ, **ಬಂಟ್ವಾಳ ತಾಲೂಕು – 574 211** | – " – |
| 9. **ಕು. ಸೌಮ್ಯ ಸಂಜೀವ,**<br>ಬಿನ್ ಸಂಜೀವ ಗುರಿಕಾರ<br>ಬಿಕೋ ಕಂಪನಿ ಹತ್ತಿರ, ಕೋತಲಕಟ್ಟೆ<br>ಉಳಿಯಾರಗೋಳಿ ಗ್ರಾಮ, ಕಾಪು ಅಂಚೆ,<br>**ಉಡುಪಿ ಜಿಲ್ಲೆ – 574 106** | – " – |
| 10. **ಶ್ರೀ ಗಂಗರಾಜು**<br>ಬಿ.ಡಿ. ಬೆಟ್ಟಹಳ್ಳಿ, ದಾಸನಪುರ ಹೋಬಳಿ<br>ಕಡಬರೆಗೆ ಅಂಚೆ, **ಬೆಂಗಳೂರು – 562 130** | – " – |
| 11. **ಡಾ. ಭಾರ್ಗವಿ ಡಿ. ಹೆಮ್ಮಿಗೆ,**<br>ನಂ. 555/N, ಇಂದ್ರಪ್ರಸ್ಥ,<br>ನ್ಯೂ ಕಾಂತರಾಜ್ ರಸ್ತೆ, ಕುವೆಂಪು ನಗರ,<br>**ಮೈಸೂರು – 570 009** | – " – |

12. **ಶ್ರೀ ಬಾದ್‌ಷ ಸಾಂಬಾರತೋಟ,** – " –
ಪಜೀರು ಗ್ರಾಮ, ಕುರ್ನಾಡು ಅಂಚೆ
ಬಂಟ್ವಾಳ ತಾಲೂಕು, **ಮಂಗಳೂರು 574153**

13. **ಶ್ರೀ ತೇಜಸ್ವಿ ರಾಜ್** – " –
ಬಿನ್ ಗಂಗಾಧರ್, ನಂ. 602,
ಕ್ಲಾಸಿಕ್ ಹೈಟ್ಸ್ ಅಪಾರ್ಟ್‌ಮೆಂಟ್, ಬಿಜೈ,
**ಮಂಗಳೂರು – 575 005**

14. **ಶ್ರೀ ಟಿ. ನಾರಾಯಣ ಗೌಡ** – " –
ಪ್ರಾಂಶುಪಾಲರು
ಶಿಕ್ಷಕರ ಶಿಕ್ಷಣ ಮಹಾವಿದ್ಯಾಲಯ
**ದಕ್ಷಿಣ ಕನ್ನಡ, ಮಂಗಳೂರು 575001.**
(ಸಾರ್ವಜನಿಕ ಶಿಕ್ಷಣ ಆಯುಕ್ತರ ಪರವಾಗಿ)

15. **ಪ್ರೊ. ಎ. ಎಂ. ಖಾನ್** – " –
ಕುಲಸಚಿವರು (ಪರೀಕ್ಷಾಂಗ)
ಮಂಗಳೂರು ವಿಶ್ವವಿದ್ಯಾನಿಲಯ
**ಮಂಗಳಗಂಗೋತ್ರಿ–574 199.**

16. **ಪ್ರೊ. ಬಿ. ಎಸ್. ನಾಗೇಂದ್ರ ಪ್ರಕಾಶ್** – " –
ಕುಲಸಚಿವರು (ಆಡಳಿತ)
ಮಂಗಳೂರು ವಿಶ್ವವಿದ್ಯಾನಿಲಯ
**ಮಂಗಳಗಂಗೋತ್ರಿ–574 199.**

**ವಿಶೇಷ ಆಹ್ವಾನಿತರು:**

17. **ಡಾ. ದಯಾನಂದ ನಾಯ್ಕ್** – " –
ಹಣಕಾಸಿನ ಅಧಿಕಾರಿ (ಪ್ರಭಾರ)
ಮಂಗಳೂರು ವಿಶ್ವವಿದ್ಯಾನಿಲಯ
**ಮಂಗಳಗಂಗೋತ್ರಿ–574 199.**

**ಅನುಪಸ್ಥಿತ ಸದಸ್ಯರು:**

1. **ತಾಂತ್ರಿಕ ಶಿಕ್ಷಣ ನಿರ್ದೇಶಕರು** **ಸದಸ್ಯರು**
ಕರ್ನಾಟಕ ರಾಜ್ಯ
ಅರಮನೆ ರಸ್ತೆ, **ಬೆಂಗಳೂರು – 560 001.**

2. **ಶ್ರೀ ಹರೀಶ್ ಆಚಾರ್,** – " –
ಬಿನ್ ರಾಘವ ಆಚಾರ್,
"ರಕ್ಷಾ", ವಿ.ಎಸ್.ಎಸ್. ಬ್ಯಾಂಕಿನ ಹತ್ತಿರ,
ನಾಗುರಿ, ಕಂಕನಾಡಿ –575 002, **ಮಂಗಳೂರು.**

3. **ಪ್ರೊ. ಗಣಪತಿ ಭಟ್** – " –
ಪ್ರಾಂಶುಪಾಲರು, ಸರಕಾರಿ ಪ್ರಥಮ ದರ್ಜೆ ಕಾಲೇಜು,
**ಪೂಂಜಾಲಕಟ್ಟೆ – 574 233**

4. **ವೈದ್ಯಕೀಯ ಶಿಕ್ಷಣ ನಿರ್ದೇಶಕರು** – " –
ಕರ್ನಾಟಕ ರಾಜ್ಯ, ಆನಂದರಾವ್ ವೃತ್ತ
**ಬೆಂಗಳೂರು – 560 009.**

5. **ನಿರ್ದೇಶಕರು** – " –
ಪದವಿ ಪೂರ್ವ ಶಿಕ್ಷಣ ಇಲಾಖೆ
ಪದವಿ ಪೂರ್ವ ಶಿಕ್ಷಣ ಭವನ,
18ನೇ ಅಡ್ಡ ರಸ್ತೆ, ಸಂಪಿಗೆ ರಸ್ತೆ
ಮಲ್ಲೇಶ್ವರಂ, **ಬೆಂಗಳೂರು 560 003.**

*********

# ಮಂಗಳೂರು ವಿಶ್ವವಿದ್ಯಾನಿಲಯ

**ದಿನಾಂಕ 04.06.2018 ರಂದು ಪೂರ್ವಾಹ್ನ ಗಂಟೆ 11:00ಕ್ಕೆ ಸರಿಯಾಗಿ ಮಂಗಳೂರು ವಿಶ್ವವಿದ್ಯಾನಿಲಯದ ಆಡಳಿತ ಸೌಧದ ಸಿಂಡಿಕೇಟ್ ಸಭಾಂಗಣದಲ್ಲಿ ನಡೆದ ಸಿಂಡಿಕೇಟಿನ 2018ನೇ ಸಾಲಿನ ನಾಲ್ಕನೆಯ ಸಾಮಾನ್ಯ ಸಭೆಯ ನಡಾವಳಿಗಳು.**

**ಉಪಸ್ಥಿತ ಸದಸ್ಯರು**

**ಅನುಪಸ್ಥಿತ ಸದಸ್ಯರು:**

ಮಾನ್ಯ ಕುಲಪತಿಯವರು ಪ್ರಾರಂಭದಲ್ಲಿ ಎಲ್ಲಾ ಸದಸ್ಯರನ್ನು ಸಭೆಗೆ ಸ್ವಾಗತಿಸಿ ಸಭೆಯನ್ನು ಪ್ರಾರಂಭಿಸಿದರು.

## ಪ್ರಾರಂಭಿಕ

1. ಸಂಯೋಜಿತ ಕಾಲೇಜುಗಳ ಪ್ರಾಂಶುಪಾಲರ ಜೇಷ್ಠತೆ ಹಾಗೂ ಸರದಿಯ ಮೇರೆಗೆ ಮಂಗಳೂರು ವಿಶ್ವವಿದ್ಯಾನಿಲಯದ ಸಿಂಡಿಕೇಟ್‌ಗೆ ಸದಸ್ಯರಾಗಿ ಮಾನ್ಯ ಕುಲಪತಿಯವರಿಂದ ನಾಮ ನಿರ್ದೇಶನಗೊಂಡ ಶ್ರೀ ನಿತ್ಯಾನಂದ ಕೆ., ಪ್ರಾಂಶುಪಾಲರು, ಎಸ್.ಡಿ.ಎಂ. ಕಾಲೇಜ್ ಆಫ್ ಎಜುಕೇಶನ್, ಉಜಿರೆ – 574 240 ಇವರನ್ನು ಮಾನ್ಯ ಕುಲಪತಿಯವರು ಸಭೆಗೆ ಪರಿಚಯಿಸಿ ಸ್ವಾಗತಿಸಿದರು.

2. ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯ ಅಧಿನಿಯಮ 2000ದ ಪ್ರಕರಣ 14(4) ರ ಪ್ರಕಾರ, ಘನತೆವೆತ್ತ ಕುಲಾಧಿಪತಿಯವರಿಂದ ಮಂಗಳೂರು ವಿಶ್ವವಿದ್ಯಾನಿಲಯಕ್ಕೆ ಕುಲಪತಿಗಳಾಗಿ ನೇಮಕಗೊಂಡು, ದಿನಾಂಕ 05.06.2014 ರಿಂದ 04.06.2018ರ ವರೆಗೆ ಮಂಗಳೂರು ವಿಶ್ವವಿದ್ಯಾನಿಲಯದ ಕುಲಪತಿಗಳಾಗಿ ಸೇವೆ ಸಲ್ಲಿಸಿರುವ ಡಾ. ಕೆ. ಭೈರಪ್ಪ, ಗೌರವಾನ್ವಿತ ಕುಲಪತಿಗಳು ಇವರನ್ನು ಮಾನ್ಯ ಕುಲಸಚಿವರು ಎಲ್ಲಾ ಸದಸ್ಯರ ಪರವಾಗಿ ಹೃತ್ಪೂರ್ವಕ ಅಭಿನಂದನೆಗಳನ್ನು ಸಲ್ಲಿಸಿ ಅವರ ಅವಧಿಯಲ್ಲಿ ಸಲ್ಲಿಸಿದ ಸೇವೆಯನ್ನು ಕೃತಜ್ಞತಾಪೂರ್ವಕವಾಗಿ ದಾಖಲಿಸಲಾಯಿತು.

## ಪ್ರಾಸ್ತಾವಿಕ

1. ಶೈಕ್ಷಣಿಕ ವರ್ಷ 2018–19ನೇ ಸಾಲಿಗೆ ವಿಶ್ವವಿದ್ಯಾನಿಲಯದ ಪ್ರಥಮ ದರ್ಜೆ ಕಾಲೇಜು, ಕೋಣಾಜೆ ಮತ್ತು ವಿಶ್ವವಿದ್ಯಾನಿಲಯ ಕಾಲೇಜು, ಮಂಗಳೂರು ಇಲ್ಲಿಗೆ ಹೆಚ್ಚುವರಿಯಾಗಿ ಶೇಕಡಾ 10 ವಿದ್ಯಾರ್ಥಿ ಪರಿಮಿತಿಗೆ ಅನುಮತಿ ನೀಡಲು ನಿರ್ಣಯಿಸಲಾಯಿತು.

2. ಕಾಲೇಜುಗಳಿಂದ ನಿಗದಿತ ವಿದ್ಯಾರ್ಥಿ ಪರಿಮಿತಿಗಿಂತ ಹೆಚ್ಚುವರಿ ವಿದ್ಯಾರ್ಥಿ ಪರಿಮಿತಿಗಾಗಿ ಮನವಿಗಳು ಸ್ವೀಕೃತವಾದ ಹಿನ್ನೆಲೆಯಲ್ಲಿ ಮಾನ್ಯ ಕುಲಪತಿಗಳ ಅನುಮೋದನೆ ಪಡೆದು ಅನುಮತಿ ನೀಡುವುದಾಗಿ ಮತ್ತು ನಂತರ ಸಿಂಡಿಕೇಟಿನ ಘಟನೋತ್ತರ ಅನುಮೋದನೆ ಪಡೆಯುವುದು ಎಂದು ನಿರ್ಣಯಿಸಲಾಯಿತು.

3. ಕಾಲೇಜುಗಳಿಂದ ಹೆಚ್ಚುವರಿ ವಿಭಾಗಕ್ಕೆ ಅನುಮತಿ ನೀಡಲು ಮನವಿಗಳು ಬಂದಲ್ಲಿ ಸದರಿ ಸಂಸ್ಥೆಯ ಮೂಲಭೂತ ಸೌಕರ್ಯಗಳು ಲಭ್ಯವಿರುವ ಬಗ್ಗೆ ಸಂಸ್ಥೆಗೆ ಪರಿಶೀಲನಾ ಸಮಿತಿಯನ್ನು ಕಳುಹಿಸಿ ಸಮಿತಿಯ ವರದಿಯ ಆಧಾರದ ಮೇರೆಗೆ ಸಿಂಡಿಕೇಟಿನ ಅನುಮೋದನೆ ಪಡೆಯಲು ನಿರ್ಣಯಿಸಲಾಯಿತು.

4. ಸಭೆಯು, ವಿಶ್ವವಿದ್ಯಾನಿಲಯದ ಇಂಜಿನಿಯರಿಂಗ್ ವಿಭಾಗದ ಕಾರ್ಯ ವೈಖರಿ ಬಗ್ಗೆ ಮಾತನಾಡುತ್ತಾ, ಪ್ರಸ್ತುತ ವಿಶ್ವವಿದ್ಯಾನಿಲಯದಲ್ಲಿ ಒಬ್ಬರು ಸಹಾಯಕ ಅಭಿಯಂತರರು ಮತ್ತು ನಾಲ್ಕು ಜನ ಕಿರಿಯ ಅಭಿಯಂತರರು ಕಾರ್ಯನಿರ್ವಹಿಸುತ್ತಿದ್ದು, ತೆರವುಗೊಂಡಿರುವ ಕಾರ್ಯಕಾರಿ ಅಭಿಯಂತರರ ಹುದ್ದೆಯನ್ನು ಭರ್ತಿ ಮಾಡಲು ಒಬ್ಬ ಅನುಭವಿ ಕಾರ್ಯಕಾರಿ ಅಭಿಯಂತರರನ್ನು ನಿಯೋಜನೆ ಮೇರೆಗೆ ವರ್ಗಾಯಿಸಲು ತಕ್ಷಣಕ್ಕೆ ಸರ್ಕಾರಕ್ಕೆ ಪತ್ರ ಬರೆಯಲು ಸೂಚಿಸಲಾಯಿತು. ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಸಹಾಯಕ ಅಭಿಯಂತರರನ್ನು ಸಹಾಯಕ ಕಾರ್ಯಕಾರಿ ಅಭಿಯಂತರರಾಗಿ ತಕ್ಷಣವೇ ಮುಂಭಡ್ತಿ ನೀಡಿ, ಆದೇಶ

ನೀಡುವುದಾಗಿ ನಿರ್ಣಯಿಸಲಾಯಿತು. ಮುಂಬಡ್ತಿಯ ಜೊತೆಗೆ ಕಾರ್ಯಕಾರಿ ಅಭಿಯಂತರರ ಪ್ರಭಾರ ನೀಡಬೇಕೆಂದು ಸಭೆಯು ನಿರ್ಣಯಿಸಿತು.

ಸಹಾಯಕ ಅಭಿಯಂತರ ಹುದ್ದೆಯಿಂದ ಸಹಾಯಕ ಕಾರ್ಯಕಾರಿ ಅಭಿಯಂತರರ ಹುದ್ದೆಗೆ ಮುಂಬಡ್ತಿ ನೀಡುವ ಬಗ್ಗೆ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000 ಪ್ರಕಾರ ಪರಿನಿಯಮವನ್ನು ರಚಿಸಿ ಸರಕಾರದ ಅನುಮೋದನೆಗೆ ಈ ಹಿಂದೆಯೇ ಸಲ್ಲಿಸಲಾಗಿದ್ದು, ಸದರಿ ಪರಿನಿಯಮಕ್ಕೆ ಸರ್ಕಾರದಿಂದ ಅನುಮೋದನೆ ದೊರಕದ ಪಕ್ಷದಲ್ಲಿ ಸದರಿಯವರನ್ನು ಹಿಂದಿನ ಹುದ್ದೆಯಲ್ಲಿಯೇ ಮುಂದುವರಿಸುವುದು.

5. ದಿನಾಂಕ 23.05.2018ರಂದು ನಡೆದ ಸಿಂಡಿಕೇಟು ಸಭೆಯ ಕಾರ್ಯಸೂಚಿ ಸಂಖ್ಯೆ: ಸಿಬ್ಬಂದಿ ಸಾ.ಸ3:29(2018) ರಲ್ಲಿನ ನಿರ್ಣಯಕ್ಕೆ ಸಂಬಂಧಿಸಿ ತಾತ್ಕಾಲಿಕ ನೆಲೆಯಲ್ಲಿ ಸೇವೆ ಸಲ್ಲಿಸಿ ಖಾಯಂಗೊಂಡಿರುವ 17 ಮಂದಿ ಬೋಧಕೇತರ ಸಿಬ್ಬಂದಿಗಳು ಮನವಿ ಸಲ್ಲಿಸಿರುವ ಹಿನ್ನೆಲೆಯಲ್ಲಿ ಹೆಚ್ಚುವರಿಯಾಗಿ ಪಾವತಿಸಿರುವ ವೇತನದ ವಸೂಲಾತಿ ಬಗ್ಗೆ ಮರುಪರಿಶೀಲಿಸಿ ಸರ್ಕಾರಿ ಲೆಕ್ಕಪರಿಶೋಧಕರಿಗೆ ಅವರ ಮನವಿಯನ್ನು ಪುರಸ್ಕರಿಸಲು ಪತ್ರ ಬರೆಯಲು ಸಿಂಡಿಕೇಟು ಸಭೆಯು ನಿರ್ಣಯಿಸಿತು.

6. ಶ್ರೀ ಸುರೇಶ್, ಸಹಾಯಕ ಪ್ರಾಧ್ಯಾಪಕರು, ಅರ್ಥಶಾಸ್ತ್ರ ವಿಭಾಗ, ಫೀಲ್ಡ್ ಮಾರ್ಷಲ್ ಕೆ.ಎಂ. ಕಾರ್ಯಪ್ಪ ಕಾಲೇಜು, ಮಡಿಕೇರಿ ಇವರಿಗೆ ತಮ್ಮ ಮಕ್ಕಳ ವೈದ್ಯಕೀಯ ಚಿಕಿತ್ಸೆಗೆ ಅನುಕೂಲವಾಗುವಂತೆ ಸದರಿಯವರನ್ನು ಮುಂದಿನ ಆದೇಶದವರೆಗೆ ವಿಶ್ವವಿದ್ಯಾನಿಲಯ ಕಾಲೇಜು, ಮಂಗಳೂರು ಇಲ್ಲಿಗೆ ತಕ್ಷಣದಿಂದಲೇ ವರ್ಗಾಯಿಸಿ ಆದೇಶ ಹೊರಡಿಸಲು ನಿರ್ಣಯಿಸಲಾಯಿತು.

**I ನಡಾವಳಿಗಳ ದೃಢೀಕರಣ**

1. ದಿನಾಂಕ 28.04.2018ರಂದು ನಡೆದ 2018ನೇ ಸಾಲಿನ ತೃತೀಯ ಸಾಮಾನ್ಯ ಸಭೆಯ ನಡಾವಳಿಗಳನ್ನು ದೃಢೀಕರಿಸಲಾಯಿತು.

**II ಅನುಸರಣಾ ವರದಿಯ ಅನುಮೋದನೆ**

1. ದಿನಾಂಕ 13.03.2018ರಂದು ನಡೆದ 2018ನೇ ಸಾಲಿನ ದ್ವಿತೀಯ ವಿಶೇಷ ಸಭೆಯ ಅನುಸರಣಾ ವರದಿಯನ್ನು ಅನುಮೋದಿಸಲಾಯಿತು.
2. ದಿನಾಂಕ 26.03.2018ರಂದು ನಡೆದ 2018ನೇ ಸಾಲಿನ ದ್ವಿತೀಯ ಸಾಮಾನ್ಯ ಸಭೆಯ ಅನುಸರಣಾ ವರದಿಯನ್ನು ಅನುಮೋದಿಸಲಾಯಿತು.

**III ಈ ಸಿಂಡಿಕೇಟು ಸಭೆಗೆ ಮಂಡಿಸಿರುವ ಕಾರ್ಯಸೂಚಿಗಳು:**

**ಕಾರ್ಯಸೂಚಿ ಸಂಖ್ಯೆ :** ಸಿಂಡಿಕೇಟು ಸಾಸ4:1(2018)

**ವಿಷಯ:** ಶಿಕ್ಷಣ ಸಂಯುಕ್ತ ಅಧ್ಯಯನ ಮಂಡಳಿ ಪುನರ್ರಚಿಸುವ ಬಗ್ಗೆ.

**ನಿರ್ಣಯ:** ಅಧ್ಯಯನ ಮಂಡಳಿಯನ್ನು ಪುನರ್ರಚಿಸುವ ಅಧಿಕಾರವನ್ನು ಮಾನ್ಯ ಕುಲಪತಿಯವರಿಗೆ ನೀಡಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಎಸಿಸಿ ಸಾಸ4:2(2018)

**ವಿಷಯ:** ವಿಶ್ವವಿದ್ಯಾನಿಲಯ ಸಂಜೆ ಕಾಲೇಜು, ಮಂಗಳೂರು ಇಲ್ಲಿ ಶೈಕ್ಷಣಿಕ ವರ್ಷ 2018–19 ನೇ ಸಾಲಿನಿಂದ ಎಂ.ಎ. ಇಂಗ್ಲೀಷ್ ಕೋರ್ಸನ್ನು ಪ್ರಾರಂಭಿಸುವ ಬಗ್ಗೆ.

**ನಿರ್ಣಯ:** ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಆಡಳಿತ ಸಾಸ4:3(2018)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದ ಪ್ರಸಾರಾಂಗಕ್ಕೆ ಸಂಚಾರಿ ಲೈಬ್ರೆರಿ ಬಸ್ – ಹೊಸ ವಾಹನ ಖರೀದಿ ಬಗ್ಗೆ.

**ನಿರ್ಣಯ:** ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ : ಎಸಿಸಿ ಸಾಸ4:4(2018)

ವಿಷಯ: ಶೈಕ್ಷಣಿಕ ವರ್ಷ 2018-19ನೇ ಸಾಲಿಗೆ ನಿಗದಿತ ವಿದ್ಯಾರ್ಥಿ ಪರಿಮಿತಿಗಿಂತ ಹೆಚ್ಚುವರಿ ವಿದ್ಯಾರ್ಥಿ ಪರಿಮಿತಿ ಹಾಗೂ ಹೆಚ್ಚುವರಿ ವಿಭಾಗಕ್ಕೆ ಅನುಮತಿ ನೀಡುವ ಮತ್ತು ಶುಲ್ಕ ನಿಗದಿ ಪಡಿಸುವ ಬಗ್ಗೆ.

ನಿರ್ಣಯ: ಪ್ರಸ್ತಾವನೆಯನ್ನು ಸಿಂಡಿಕೇಟ್ ಸಭೆಗೆ ಮಂಡಿಸಿ ಅನುಮೋದನೆ ಪಡೆಯಬೇಕೆಂದು ತೀರ್ಮಾನಿಸಲಾಯಿತು.

ಕಾರ್ಯಸೂಚಿ ಸಂಖ್ಯೆ : ಎಸಿಸಿ ಸಾಸ4:5(2018)

ವಿಷಯ: ಶೈಕ್ಷಣಿಕ ವರ್ಷ 2018-19ನೇ ಸಾಲಿಗೆ ಶ್ರೀದೇವಿ ಕಾಲೇಜು, ಮಂಗಳೂರು ಎಂಬ ವಿದ್ಯಾ ಸಂಸ್ಥೆಗೆ ಬಿ. ಕಾಂ. ಕೋರ್ಸಿನ ಹೆಚ್ಚುವರಿ ವಿಭಾಗಕ್ಕೆ ಅನುಮತಿ ನೀಡುವ ಬಗ್ಗೆ.

ನಿರ್ಣಯ: ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ : ಸಾರ್ವತ್ರಿಕ ಸಾಸ4:6(2018)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದ SPARSH Cell ನ ವಿಚಾರಣಾ ಸಮಿತಿಯು ಸಲ್ಲಿಸಿರುವ ವರದಿಯನ್ನು ಸಿಂಡಿಕೇಟ್ ಸಭೆಯ ನಿರ್ಣಯಕ್ಕಾಗಿ ಮಂಡಿಸುವ ಬಗ್ಗೆ.

ನಿರ್ಣಯ: ಡಾ. ಉಮೇಶ್ ನಾಯ್ಕ್, ಸಹಾಯಕ ಪ್ರಾಧ್ಯಾಪಕರು, ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿಭಾಗ ಇವರ ಮೇಲಿನ ಆಪಾದನೆಯ ಬಗ್ಗೆ ಹಿಂದಿನ ವಿಚಾರಣಾ ಸಮಿತಿಯು ನೀಡಿದ ವರದಿಯನ್ನು ಮರುಪರಿಶೀಲಿಸಿ ವರದಿಯನ್ನು ಪಡೆಯಲು ಹೊಸ SPARSH Cell ನ ವಿಚಾರಣಾ ಸಮಿತಿಗೆ ಸಲ್ಲಿಸಲು ನಿರ್ಣಯಿಸಲಾಯಿತು.

ಕಾರ್ಯಸೂಚಿ ಸಂಖ್ಯೆ : ಸಿಬ್ಬಂದಿ ಸಾಸ4:7(2018)

ವಿಷಯ: ಡಾ. ಪ್ರೀತಿ ಕೀರ್ತಿ ಡಿಸೋಜಾ, ಸಹಾಯಕ ಪ್ರಾಧ್ಯಾಪಕರು ವಾಣಿಜ್ಯಶಾಸ್ತ್ರ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ ಇವರಿಗೆ ದಿನಾಂಕ 14.08.2018ರಿಂದ 19.08.2018ರವರೆಗೆ BALI, INDONESIA ಇಲ್ಲಿ ನಡೆಯಲಿರುವ ಅಂತಾರಾಷ್ಟ್ರೀಯ ಸಮ್ಮೇಳನದಲ್ಲಿ ಭಾಗವಹಿಸಲು ಅನುಮತಿ ನೀಡುವ ಬಗ್ಗೆ.

ನಿರ್ಣಯ: ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ : ಸಿಬ್ಬಂದಿ ಸಾಸ4:8(2018)

ವಿಷಯ: ಡಾ. ಶಾಮಸುಂದರ್ ಜೆ., ಸಹಾಯಕ ಪ್ರಾಧ್ಯಾಪಕರು, ಮಾನವಪ್ರಜ್ಞೆ ಮತ್ತು ಯೋಗ ವಿಜ್ಞಾನ ವಿಭಾಗ ಇವರ ಮೇಲಿನ ದೂರುಗಳ ಬಗ್ಗೆ ನಡೆಸಿದ ಇಲಾಖಾ ವಿಚಾರಣೆಯ ವರದಿ – ಶಿಸ್ತು ಕ್ರಮಕೈಗೊಳ್ಳುವ ಕುರಿತು.

ನಿರ್ಣಯ: ಮುಂದಿನ ಸಭೆಗೆ ಮುಂದೂಡಲಾಯಿತು.

ಕಾರ್ಯಸೂಚಿ ಸಂಖ್ಯೆ : ಡಿಇವಿ ಸಾಸ4:9(2018)

ವಿಷಯ: ಗಣಕಯಂತ್ರ ಕೇಂದ್ರದ – ಸೈಬರ್ ಲ್ಯಾಬ್‌ನ 35 Mbps 4 W MLLN ಇಂಟರ್‌ನೆಟ್ ಪೋರ್ಟ್ ಶುಲ್ಕ ಪಾವತಿಸಿದ ಬಗ್ಗೆ.

ನಿರ್ಣಯ: ಪ್ರಸ್ತಾವನೆಯನ್ನು ಘಟನೋತ್ತರವಾಗಿ ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ : ಡಿಇವಿ ಸಾಸ4:10(2018)

ವಿಷಯ: Father Muller Homoeopathic Medical College ಇವರೊಂದಿಗೆ ಒಡಂಬಡಿಕೆ ಮಾಡಿಕೊಳ್ಳುವ ಪ್ರಸ್ತಾವನೆಯನ್ನು ಅನುಮೋದಿಸುವ ಬಗ್ಗೆ.

ನಿರ್ಣಯ: ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಎಸಿಸಿ ಸಾಸ4:11(2018)

**ವಿಷಯ:** M/S. Muvva Edukul India Pvt Ltd., Bengaluru ಇವರ ಸ್ನಾತಕೋತ್ತರ ಪದವಿಗಳ ಪ್ರವೇಶಾತಿಯ ಅರ್ಜಿಯನ್ನು online ಮುಖಾಂತರ ಸಲ್ಲಿಸುವ ದರ ಪಟ್ಟಿ ಮಂಜೂರಾತಿ ಬಗ್ಗೆ.

**ನಿರ್ಣಯ:** ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಎಸಿಸಿ ಸಾಸ4:12(2018)

**ವಿಷಯ:** ಬೆಸೆಂಟ್ ಮಹಿಳಾ ಕಾಲೇಜು, ಮಂಗಳೂರು ಎಂಬ ವಿದ್ಯಾ ಸಂಸ್ಥೆಗೆ B.Sc. (FND) ಕೋರ್ಸಿಗೆ ಹೆಚ್ಚುವರಿ ವಿದ್ಯಾರ್ಥಿ ಪರಿಮಿತಿಗೆ ಅನುಮತಿ ಹಾಗೂ M.Sc. (Food Science & Nutrition) ಕೋರ್ಸಿನ ಸಂಯೋಜನೆ ಬಗ್ಗೆ.

**ನಿರ್ಣಯ:** ಪ್ರಸ್ತಾವನೆಯನ್ನು ಅನುಮೋದಿಸಲಾಯಿತು. ಶೇಕಡಾ 10 ಹೆಚ್ಚುವರಿ ವಿದ್ಯಾರ್ಥಿ ಪರಿಮಿತಿಗೆ ಅನುಮತಿ ಮತ್ತು ತತ್‌ಕ್ಷಣವೇ ಹೊಸ ಸಮಿತಿಯನ್ನು ಸದರಿ ಸಂಸ್ಥೆಗೆ ಕಳುಹಿಸಿ ವರದಿಯನ್ನು ಪಡೆದು ಸಿಂಡಿಕೇಟಿಗೆ ಮಂಡಿಸಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಆಡಳಿತ ಸಾಸ4:13(2018)

**ವಿಷಯ:** ಶ್ರೀ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು ಇದನ್ನು ಮಂಗಳೂರು ವಿಶ್ವವಿದ್ಯಾನಿಲಯ ವೈದ್ಯಕೀಯ ವೆಚ್ಚ ಮರುಭರಣೆಗೆ ಪರಿಗಣಿಸಿದ ಆಸ್ಪತ್ರೆಗಳ ಪಟ್ಟಿಯಲ್ಲಿ ಸೇರಿಸುವ ಮತ್ತು ಒಡಂಬಡಿಕೆ ಮಾಡಿಕೊಳ್ಳುವ ಬಗ್ಗೆ.

**ನಿರ್ಣಯ:** ಮಂಗಳೂರು ವಿಶ್ವವಿದ್ಯಾನಿಲಯವು ವೈದ್ಯಕೀಯ ವೆಚ್ಚ ಮರುಭರಣೆಗೆ ಪರಿಗಣಿಸಿರುವ ಆಸ್ಪತ್ರೆಗಳ ಪಟ್ಟಿಗೆ ಈ ಹೆಸರನ್ನು ಸೇರಿಸಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಆಡಳಿತ ಸಾಸ4:14(2018)

**ವಿಷಯ:** ಕೆ.ಎಂ.ಸಿ., ಡಾ. ಅಂಬೇಡ್ಕರ್ ಸರ್ಕಲ್, ಮಂಗಳೂರು ಇದನ್ನು ವೈದ್ಯಕೀಯ ವೆಚ್ಚ ಮರುಭರಣೆಗೆ ಪರಿಗಣಿಸಿದ ಆಸ್ಪತ್ರೆಗಳ ಪಟ್ಟಿಯಲ್ಲಿ ಸೇರಿಸುವ ಬಗ್ಗೆ.

**ನಿರ್ಣಯ:** ಪ್ರಸ್ತಾವನೆಯನ್ನು ಅನುಮೋದಿಸಲಾಯಿತು. ಮಂಗಳೂರು ವಿಶ್ವವಿದ್ಯಾನಿಲಯವು ವೈದ್ಯಕೀಯ ವೆಚ್ಚ ಮರುಭರಣೆಗೆ ಪರಿಗಣಿಸಿರುವ ಆಸ್ಪತ್ರೆಗಳ ಪಟ್ಟಿಗೆ ಈ ಹೆಸರನ್ನು ಸೇರಿಸಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಹವಿ ಸಾಸ4:15(2018)

**ವಿಷಯ:** ಉಡುಪಿ ಜಿಲ್ಲೆಯ ಬೆಳಪುವಿನಲ್ಲಿ ಅತ್ಯಾಧುನಿಕ ಸಂಶೋಧನಾ ಕೇಂದ್ರವನ್ನು ಮತ್ತು ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ ಆವರಣದಲ್ಲಿ ವಿವಿಧ ಕಟ್ಟಡಗಳ ನಿರ್ಮಾಣ ಕಾಮಗಾರಿ ಕೈಗೊಳ್ಳಲು ಕರ್ನಾಟಕ ಗೃಹ ಮಂಡಳಿಗೆ ಮೊದಲ ಕಂತಿನ ಹಣ ಬಿಡುಗಡೆ ಮಾಡುವ ಕುರಿತು.

**ನಿರ್ಣಯ:** ತಿದ್ದುಪಡಿಮಾಡಿ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಪರೀಕ್ಷಾಂಗ ಸಾಸ4:16(2018)

**ವಿಷಯ:** ಡಾ. ಉಂದುರ್ತಿ ಎನ್. ದಾಸ್ ಇವರಿಗೆ ಡಿ.ಎಸ್‌ಸಿ., ಪದವಿ ಪ್ರದಾನ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಡಿಇವಿ ಸಾಸ:4:17 (2018)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದ ಕ್ರಿಶ್ಚಿಯಾನಿಟಿ ಪೀಠಕ್ಕೆ ಮುಖ್ಯಸ್ಥರನ್ನು ನೇಮಕ ಮಾಡುವ ಬಗ್ಗೆ.

**ನಿರ್ಣಯ:** Rev. Dr. Victor George D'souza ಇವರ ಹೆಸರನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಸಿಬ್ಬಂದಿ ಸಾಸ4:18(2018)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ವಾಹನ ಚಾಲಕ ಹುದ್ದೆಯನ್ನು ಖಾಯಂ ನೆಲೆಯಲ್ಲಿ ಭರ್ತಿಗೊಳಿಸುವ ಬಗ್ಗೆ.

**ನಿರ್ಣಯ:** 1.ಶ್ರೀ ಅವಿನಾಶ್.ಟಿ. (ಎಸ್ಸಿ) 2. ಶ್ರೀ ಪ್ರವೀಣ್ ಕುಮಾರ್ ಟಿ. (ಬಿಲ್ಲವ) 3. ಶ್ರೀ ಲೋಕೇಶ್ (2ಎ ಕುಂಬಾರ) ಹಾಗೂ 4.ಶ್ರೀ ಚೇತನ್ ಕುಮಾರ್ (3ಬಿ–ಬಂಟ್ಸ್) ಪ್ರಸ್ತುತ ತಾತ್ಕಾಲಿಕ ನೆಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಇವರುಗಳನ್ನು ವಿಶ್ವವಿದ್ಯಾನಿಲಯದಲ್ಲಿ ಸುಮಾರು 4 ರಿಂದ ಏಳು ವರ್ಷಗಳವರೆಗೆ ಸೇವೆಯಲ್ಲಿದ್ದು ಖಾಲಿಯಿರುವ ವಾಹನ ಚಾಲಕ ಹುದ್ದೆಗೆ ಖಾಯಂ ಮಾಡಲು ಸರ್ಕಾರದ ಅನುಮೋದನೆಯ ನಿರೀಕ್ಷೆಯ ಮೇರೆಗೆ ಖಾಲಿ ಇರುವ ಈ ನಾಲ್ಕು ಹುದ್ದೆಗಳಿಗೆ ಈಗ ತಾತ್ಕಾಲಿಕ ಸೇವೆಯಲ್ಲಿರುವ ಈ ನಾಲ್ಕು ಚಾಲಕರನ್ನು ಖಾಯಂಗೊಳಿಸಲು ಸಿಂಡಿಕೇಟ್ ನಿರ್ಧರಿಸಿತು. ಅಲ್ಲದೇ ಇವರಿಂದ ಸರ್ಕಾರದ ಅನುಮೋದನೆ ಬಾರದಿದ್ದಲ್ಲಿ ಅವರ ಸೇವೆಯನ್ನು ಖಾಯಂ ಹುದ್ದೆಯಿಂದ ಬಿಡುಗಡೆ ಮಾಡಲಾಗುವುದು ಎಂದು ಮುಚ್ಚಳಿಕೆಯನ್ನು ಪಡೆಯಬೇಕೆಂದು ಸಿಂಡಿಕೇಟ್ ತೀರ್ಮಾನಿಸಿತು.

**ಕಾರ್ಯಸೂಚಿ ಸಂಖ್ಯೆ :** ಸಿಬ್ಬಂದಿ ಸಾಸ4:19(2018)

**ವಿಷಯ:** ದಿನಾಂಕ 01.01.2006 ರಿಂದ ಜಾರಿಗೊಂಡ ಪರಿಷ್ಕೃತ ಯುಜಿಸಿ ವೇತನ ಶ್ರೇಣಿಗೆ ಸಂಬಂಧಿಸಿದ ಅನುಶಾಸನದ ಕೆರಿಯರ್ ಎಡ್ವಾನ್ಸ್‌ಮೆಂಟ್ ಸ್ಕೀಂ ಪ್ರಕಾರ ಮಂಗಳೂರು ವಿಶ್ವವಿದ್ಯಾನಿಲಯ ಬೋಧಕರಿಗೆ ಮುಂಬಡ್ತಿ – ಆಯ್ಕೆ ಸಮಿತಿಯ ಶಿಫಾರಸ್ಸನ್ನು ಅನುಮೋದಿಸುವ ಬಗ್ಗೆ.

**ನಿರ್ಣಯ:** ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಸಾರ್ವತ್ರಿಕ ಸಾಸ4:20(2018)

**ವಿಷಯ:** KSHEC ಯು K-SURF ಯೋಜನೆಯಲ್ಲಿ ICARE ಮೂಲಕ ನಡೆಸಿದ ಮೌಲ್ಯಮಾಪನದಲ್ಲಿ ಮಂಗಳೂರು ವಿಶ್ವವಿದ್ಯಾನಿಲಯಕ್ಕೆ ದೊರೆತ ರೇಟಿಂಗ್ ಕುರಿತು ಸಿಂಡಿಕೇಟ್‌ನಲ್ಲಿ ಕೈಗೊಂಡ ನಿರ್ಣಯವನ್ನು ಮರು ಪರಿಶೀಲಿಸುವ ಕುರಿತು.

**ನಿರ್ಣಯ:** ಭವಿಷ್ಯದಲ್ಲಿ ಇಂತಹ ಘಟನೆಗಳು ಮರುಕಳಿಸದಂತೆ ಮತ್ತು ವಿಶ್ವವಿದ್ಯಾನಿಲಯದ ಗೌರವಕ್ಕೆ ಧಕ್ಕೆಯಾಗುವ ರೀತಿಯಲ್ಲಿ ಕಾರ್ಯವನ್ನು ಮಾಡಬಾರದಾಗಿ ಎಚ್ಚರಿಕೆ ಪತ್ರ ನೀಡಲು ನಿರ್ಣಯಿಸಲಾಯಿತು.

ಮಾನ್ಯ ಕುಲಪತಿಯವರು ಸದಸ್ಯರ ಸಲಹೆ ಸಹಕಾರಗಳಿಗೆ ಧನ್ಯವಾದಗಳನ್ನರ್ಪಿಸಿ ಸಭೆಯನ್ನು ಮುಕ್ತಾಯಗೊಳಿಸಿದರು.

| | |
|---|---|
| ಸಹಿ/– | ಸಹಿ/– |
| ಕುಲಸಚಿವರು | ಕುಲಪತಿಗಳು |